35. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ಕುಟುಂಬ ನಿವೃತ್ತಿ ವೇತನ) ನಿಯಮಾವಳಿ 2002ರ ನಿಯಮ 17ಕ್ಕೆ ತಿದ್ದುಪಡಿ ಮಾಡಿ ದಿನಾಂಕ 11ನೇ ಫೆಬ್ರವರಿ, 2004ರಂದು ಹೊರಡಿಸಲಾದ ಆಇ:04:ಸನಿತಿ:2000ನೇ ಸಂಖ್ಯೆಯ ಅಧಿಸೂಚನೆ;

36. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಮೂನೆ–1ಬಿಗೆ ತಿದ್ದುಪಡಿ ಮಾಡಿ ದಿನಾಂಕ 11–3–2004ರಂದು ಹೊರಡಿಸಲಾದ ಆಇ:07:ಸನಿತಿ:2003ನೇ ಸಂಖ್ಯೆಯ ಅಧಿಸೂಚನೆ;

37. 2002ರ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ಕುಟುಂಬ ನಿವೃತ್ತಿ ವೇತನ) ನಿಯಮಾವಳಿಗಳ ನಮೂನೆ 'ಎ'ಗೆ ತಿದ್ದುಪಡಿ ಮಾಡಿ ದಿನಾಂಕ 26ನೇ ಏಪ್ರಿಲ್, 2004ರಂದು ಹೊರಡಿಸಲಾದ ಆಇ:08:ಸನಿತಿ:2003ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

5. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ:– ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ನಡೆದಿರುವ ಅವ್ಯವಹಾರದ ಕುರಿತು

ಶ್ರೀ ಜೆ.ಸಿ. ಮಾಧುಸ್ವಾಮಿ:– ನಿಲುವಳಿ ಸೂಚನೆ ನಾವು ಸಹ ಕೊಟ್ಟಿದ್ದೇವೆ.

ಅಧ್ಯಕ್ಷರು:– ಇದಾದ ಮೇಲೆ ತಮಗೆ ಅವಕಾಶ ಕೊಡುತ್ತೇನೆ

ಶ್ರೀ ಜೆ.ಸಿ. ಮಾಧುಸ್ವಾಮಿ:– ನಿಲುವಳಿ ಸೂಚನೆ ಕೊಟ್ಟಾಗ ತಾವು ಸಭೆ ನಡೆಸುವುದಕ್ಕೆ ಬರುವುದಿಲ್ಲ.

+ಶ್ರೀ ಬಿ.ಎಸ್. ಯಡಿಯೂಪ್ಪ (ವಿರೋಧ ಪಕ್ಷದ ನಾಯಕರು):– ನಾವೇನು ಪ್ರತಿ ಪಕ್ಷದ ಸದಸ್ಯರು ಎಲ್ಲರೂ ಸೇರಿ ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡಿದ್ದೇವೆ. ತಾವು ಆದ್ಯತೆ ಕೊಡಬೇಕಾಗುತ್ತೆ, ಅದು ಚರ್ಚೆ ಆಗಿ ಮುಗಿದ ಮೇಲೆ ತಾವು ರೆಗ್ಯುಲರ್ ಬಿಸ್‌ನೆಸ್ ತೆಗೆದುಕೊಳ್ಳಬೇಕೇ ಹೊರತು.

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಇತರರಲ್ಲಿ ನಾನು ವಿನಂತಿ ಮಾಡುವುದು ಏನೆಂದರೆ, ಇವತ್ತು ಕೆಲವು ವಿಷಯಗಳು ಇವೆ. ಆದಾದ ಮೇಲೆ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಸಂಸದೀಯ ವ್ಯವಹಾರಗಳ ಸಚಿವರು ಹೇಳಲಿ, ನಿಲುವಳಿ ಸೂಚನೆ ಇರುವಂತಹ ಸಂದರ್ಭದಲ್ಲಿ ಬೇರೆ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಇದೆಯೊ? ತಾವೇ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ವ್ಯವಹಾರಗಳ ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯನ್ನು ತಮ್ಮ ಮನವೊಲಿಸಿ ತೆಗೆದುಕೊಳ್ಳಬೇಕು, ಬೇಡ ಎಂದು ಪ್ರಸ್ತಾಪ ಮಾಡುವ ಅಂತರ್ಗತವಾದ ಹಕ್ಕು ತಮಗೆ ಇದೆ, ಎಲ್ಲರಿಗೂ ಇದೆ. ಇಲ್ಲಿ ಬಂದಿರುವುದು ಕೇವಲ ನಮ್ಮ ಮುಂದಿನ ಲೆಕ್ಕ ಪತ್ರಗಳು ಸಮಿತಿ....

ಶ್ರೀ ವಾಟಾಳ್ ನಾಗರಾಜ್:– ನಿಲುವಳಿ ಸೂಚನೆ ಎಂದರೆ ಒಂದು ಪತ್ರವನ್ನೂ ಕೂಡ ಓದುವುದಕ್ಕಾಗುವುದಿಲ್ಲ. ಯಾವುದೇ ಕಾರ್ಯಕ್ರಮ ಇಲ್ಲ. ಅದನ್ನೇ ತೆಗೆದುಕೊಳ್ಳಬೇಕು. ತಾವು ನಿಲುವಳಿ ಸೂಚನೆಗೆ ಅವಕಾಶ ಕೊಡಬೇಕು. ಇಲ್ಲಿ ಕೂಲಿಗಾಗಿ ಕಾಳು ನಡೆದಿರತಕ್ಕಂತಹ ದೊಡ್ಡ

ಹಗರಣದ ಬಗ್ಗೆ ಚರ್ಚೆ ಮಾಡುವುದಕ್ಕೆ ನಿಲುವಳಿ ಸೂಚನೆ ಪ್ರಮುಖವಾಗಿದೆ. ಅದು ಬಿಟ್ಟು ಬೇರೆ ಯಾವುದೂ ತೆಗೆದುಕೊಳ್ಳಬಾರದು.

ಶ್ರೀ ಜೆ.ಸಿ. ಮಾಧುಸ್ವಾಮಿ:– ನಿಲುವಳಿ ಸೂಚನೆ ಕೊಟ್ಟಾಗ ಬೇರೆ ಎಲ್ಲಾ ಬಿಸ್‌ನೆಸ್ ಪಕ್ಕಕ್ಕೆ ಇಟ್ಟು ಇದನ್ನು ತೆಗೆದುಕೊಳ್ಳಬೇಕು. ನಿಲುವಳಿ ಸೂಚನೆ ನಾವು ಕೊಟ್ಟಾಗ ಅವೆಲ್ಲಾ ಮಾಡಿ ಆ ಮೇಲೆ ಬರುತ್ತದೆ ಎಂದು ಹೇಳಲಿಕ್ಕೆ ನಾವೇನು ಬೇರೆ ನೋಟೀಸ್ ಕೊಟ್ಟಿದ್ದೇವೆಯಾ?

ಅಧ್ಯಕ್ಷರು:– ಮಾನ್ಯ ಸದಸ್ಯರಲ್ಲಿ ನನ್ನ ಮನವಿ ಏನೆಂದರೆ, ಫಾರ್ಮಲ್ ಬಿಸ್‌ನೆಸ್ ಏನಿದೆ, ಇದು ಚುನಾವಣಾ ಪ್ರಸ್ತಾವದ ಬಗ್ಗೆ ಒಂದು ಸೂಚನೆಯನ್ನು ಮಂಡಿಸಬೇಕಾಗಿದೆ. ಆದಾದ ಮೇಲೆ ತಮಗೆ ಒಂದು ಅವಕಾಶ ಕೊಡುತ್ತೇನೆ. ತಾವು ದಯವಿಟ್ಟು ಅವಕಾಶ ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್:– ನಾವು ಅವಕಾಶ ಮಾಡಿ ಕೊಡೋಣ, ನಿಲುವಳಿ ಸೂಚನೆಗೆ ಮೊದಲ ಆದ್ಯತೆ, ತಾವು ಅವಕಾಶ ಕೊಡುವುದು ಬಿಡುವುದು ತಮಗೆ ಬಿಟ್ಟಿದ್ದು. ನಿಲುವಳಿ ಸೂಚನೆ ಮಂಡಿಸಿದಾಗ ನಿಲುವಳಿ ಎಂದರೆ, ಸದನದ ಎಲ್ಲಾ ಕಾರ್ಯಕಲಾಪಗಳನ್ನು ನಿಲ್ಲಿಸಿ ನಿಲುವಳಿ ಸೂಚನೆ ತೆಗೆದುಕೊಳ್ಳುವುದು. ಇದು ಯಾವುದೂ ನಡೆಯುವ ಹಾಗಿಲ್ಲ.

ಅಧ್ಯಕ್ಷರು:– ನಂತರ ನಾನು ಅವಕಾಶ ಮಾಡಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನಿಲುವಳಿ ಸೂಚನೆ ಒಂದನ್ನೇ ತೆಗೆದುಕೊಳ್ಳಬೇಕು. ನಾವೆಲ್ಲರೂ ಸಹಿ ಮಾಡಿ ತಮಗೆ ಈಗಾಗಲೇ ಕಳುಹಿಸಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಹೇಳುವ ವಿಚಾರವನ್ನು ತಿಳಿಸಿದ್ದೀರಿ. ಮಾನ್ಯ ಈಶ್ವರಪ್ಪ ನವರು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಪ್ರಶ್ನೆ ಬರತಕ್ಕಂಥದ್ದು ಏನೆಂದರೆ ಅನೇಕ ಉದಾಹರಣೆಗಳು ಈ ಸದನದಲ್ಲಿ ನಡೆದಿವೆ. ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಂಡ ಮೇಲೆ ನಿಲುವಳಿ ಸೂಚನೆಯನ್ನು ತೆಗೆದುಕೊಂಡಿರತಕ್ಕಂಥದ್ದು ಇದೆ. ಕೇವಲ ಗಮನ ಸೆಳೆಯುವ ಸೂಚನೆಗಳು ಆದ ಮೇಲೆ ನಿಲುವಳಿ ಸೂಚನೆಯನ್ನು ತೆಗೆದುಕೊಂಡಿರತಕ್ಕಂಥದ್ದು ಇದೆ. ನಿಲುವಳಿ ಸೂಚನೆ ಬಂದ ತಕ್ಷಣವೇ ಅದನ್ನೇ ಮೇಲ್ನೋಟಕ್ಕೆ ತೆಗೆದುಕೊಳ್ಳಬೇಕೆಂದೇನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್:– ನಿಮ್ಮ ವಾದ ಸಂಸದೀಯ ಸಚಿವರಾಗಿ ಸರಿಯಲ್ಲ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್:– ತಾವು ಇದೇ ಸದನದಲ್ಲಿ ಹಿರಿಯ ಸದಸ್ಯರಾಗಿದ್ದೀರಿ. ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಂಡ ನಂತರದಲ್ಲಿ ನಿಲುವಳಿ ಸೂಚನೆಯನ್ನು ತೆಗೆದುಕೊಂಡಿರುವ ಉದಾಹರಣೆಗಳು ಬೇಕಾದಷ್ಟು ಇವೆ. ತಾವು ಹಿರಿಯರ ಸದಸ್ಯರಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ:– ಅದೇ ರೀತಿ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿಯೂ ನಿಲುವಳಿ ಸೂಚನೆಯನ್ನು ತೆಗೆದುಕೊಂಡಿರುವ ಉದಾಹರಣೆ ಇದೆ.

ಶ್ರೀ ಎಂ.ಪಿ. ಪ್ರಕಾಶ್:– ಬೇಕಾದಷ್ಟು ಬೇಕಾದಂಥ ಉದಾಹರಣೆಗಳು ಇವೆ. ಆ ಬಗ್ಗೆ ಪ್ರಶ್ನೆಯೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೇ, ಇವೊತ್ತಿನ ಸೂಚನೆಯಲ್ಲಿ ಬೇರೆ ಬೇರೆ ಪ್ರಕ್ರಿಯೆಗಳು ಏನಿವೆ ಅವುಗಳನ್ನೆಲ್ಲವನ್ನೂ ನಿಲ್ಲಿಸಿ ತಾವು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳ ಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುತ್ತೀರೋ, ಇಲ್ಲವೋ ಎಂಬುದನ್ನು ತಾವು ಮೊದಲು ಹೇಳಬೇಕು. ಆಮೇಲೆ ಬೇರೆಯದು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಮೊದಲು ತಾವು ನಿಲುವಳಿ ಸೂಚನೆಗೆ ಅವಕಾಶವನ್ನು ಕೊಟ್ಟು ನಂತರ ಬೇರೆಯ ವಿಚಾರಗಳ ಬಗ್ಗೆ ಮಾತನಾಡಬಹುದು. ಮೊದಲು ನಿಲುವಳಿ ಸೂಚನೆ ತೆಗೆದುಕೊಳ್ಳಬೇಕೆಂದು ನಿಲುವಳಿ ಸೂಚನೆಗೆ ನಾವೆಲ್ಲರೂ ಸಹಿಯನ್ನು ಮಾಡಿ ಕಳುಹಿಸಿದ್ದೇವೆ. ಆ ನಿಲುವಳಿ ಸೂಚನೆ ಬಹಳ ಪ್ರಾಮುಖ್ಯವಾದುದು. ಕೂಲಿಗಾಗಿ ಕಾಳು ಯೋಜನೆಯಲ್ಲಿ ದೊಡ್ಡ ದುರಂತವಾಗಿದೆ ಮತ್ತು ದೊಡ್ಡ ಹಗರಣವೇ ನಡೆದಿದೆ. ಆದುದರಿಂದ ಅದರ ಬಗ್ಗೆ ಚರ್ಚೆಗೆ ಮೊದಲು ತಾವು ಅವಕಾಶವನ್ನು ಕೊಟ್ಟು ನಂತರ ದಯಮಾಡಿ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೇ ಹೊರತು ಅದಲ್ಲದೇ ಬೇರೆ ಯಾವುದೇ ಕಾಗದ ಪತ್ರಗಳನ್ನು ಮಂಡಿಸುವುದು ಆಗಲಿ ಅಥವಾ ಬೇರೆ ಯಾವುದೇ ಕಲಾಪ ನಡೆಯಲು ಸಾಧ್ಯವೇ ಇಲ್ಲ.

ಅಧ್ಯಕ್ಷರು:– ಮಾನ್ಯ ಸದಸ್ಯರಲ್ಲಿ ನನ್ನ ಮನವಿಯೇನೆಂದರೆ ನಾವು ಆಗಲೇ ತಮಗೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ. ಆದ್ದರಿಂದ ಸರ್ಕಾರಿ ಕಾರ್ಯಕಲಾಪವಾದ ಚುನಾವಣಾ ಪ್ರಸ್ತಾವ ಏನಿದೆ ಅದು ಮುಗಿದ ತಕ್ಷಣ ನಾನು ಅವಕಾಶ ಮಾಡಿಕೊಡುತ್ತೇನೆ. ಅದು ಎರಡು ನಿಮಿಷದಲ್ಲಿ ಮುಗಿದುಹೋಗುತ್ತದೆ.

+ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ):– ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಪ್ರಕಾಶ್‌ರವರು ಸ್ವಲ್ಪ ಆತುರ ಪಟ್ಟರು ಎಂದು ಅನಿಸುತ್ತದೆ. ನಮ್ಮ ನಿಯಮಾವಳಿಗಳ ಪ್ರಕಾರ ನಿಲುವಳಿ ಸೂಚನೆಗೆ ವಿರೋಧ ಪಕ್ಷದವರಾಗಲಿ, ವಿಶೇಷವಾಗಿ ಅವರೇ ಕೊಡತಕ್ಕಂಥದ್ದು. ಅವರು ತಮ್ಮ ಪೀಠಕ್ಕೆ ಸೂಚನೆಯನ್ನು ಕೊಟ್ಟಾಗ ನಮ್ಮ ನಿಯಮಾವಳಿಗಳ ಪ್ರಕಾರ ಪ್ರಶ್ನೋತ್ತರ ವೇಳೆ ಆದ ಮೇಲೆ ಬೇರೆ ಯಾವುದೇ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳದೇ ಆದ್ಯತೆ ಮೇರೆಗೆ ನಿಲುವಳಿ ಸೂಚನೆಯನ್ನು ನಾವು ಚರ್ಚೆಗೆ ತೆಗೆದುಕೊಳ್ಳಬೇಕು. ಅದಕ್ಕೆ ಸಮ್ಮತಿ ಕೊಡುವುದು ಅಥವಾ ಬಿಡತಕ್ಕಂಥದ್ದು, ಮೆರಿಟ್ಸ್‌ನ್ನು ಅಲೋ ಮಾಡುವುದು, ಅವೆಲ್ಲಾ ತಮ್ಮ ವಿವೇಚನೆಗೆ ಬಿಟ್ಟಂಥ ವಿಷಯ. ಇವೊತ್ತು ಅಜೆಂಡಾದಲ್ಲಿ ಪ್ರಶ್ನೋತ್ತರ ವೇಳೆಯ ಕಲಾಪ ಇಲ್ಲ. ಆದುದರಿಂದ ಈಗ ಅವರೇನು ಪ್ರಸ್ತಾಪ ಮಾಡುತ್ತಿದ್ದಾರೆ ಬಹುಶಃ ಅದು ಅವರ ಹಕ್ಕು. ಸಮರ್ಥನೆ ಎಂದು ನನ್ನ ಅನಿಸಿಕೆ. ಪ್ರಕಾಶ್‌ರವರು ಏನು ಹೇಳಿದರೆಂದು ಪ್ರಶ್ನೋತ್ತರ ವೇಳೆಯಾದ ಮೇಲೆ ನಿಲುವಳಿ ಸೂಚನೆ ತೆಗೆದುಕೊಂಡಿರುವ ಉದಾಹರಣೆಗಳು ಇವೆ ಎಂದರು. ಪ್ರಶ್ನೋತ್ತರ ವೇಳೆ ಆದ ಮೇಲೆ ತೆಗೆದುಕೊಳ್ಳಬೇಕೆಂಬುದೇ ನಮ್ಮ ನಿಯಮದಲ್ಲಿರುವುದು. ಆದರೆ ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ತಾವು ಈಗ ಕಾವೇರಿ ವಿಚಾರ ಪ್ರಸ್ತಾಪ ಮಾಡಿದಿರಿ. ಅಧ್ಯಕ್ಷರು ಹೇಳಿದರು ಈಗ ಅಜೆಂಡಾ ಇದೆ ಎಂದು. ಆದರೆ ಅಜೆಂಡಾದಲ್ಲಿ ಕಾವೇರಿ ಇಶ್ಯೂ ಇಲ್ಲ. ನಿಮಗೆ ಅನುಕೂಲ

ಇದ್ದಾಗ ರೂಲ್ಸ್ ಬಗ್ಗೆ ವಾದ ಮಾಡುವುದು, ಅನಾನುಕೂಲವಿದ್ದಾಗ ಬಿಡುವುದು, ಈ ರೀತಿ ಆಗಬಾರದು. ಅಜೆಂಡಾ ಪ್ರಕಾರವೇ ನಾವು ಹೋಗಿದ್ದಿದ್ದರೆ ಈ ಸಮಸ್ಯೆ ಉದ್ಭವ ಆಗುತ್ತಿರಲಿಲ್ಲ. ಅಧ್ಯಕ್ಷರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವೇನು ಅಜೆಂಡಾ ಕಳುಹಿಸಿರುತ್ತೀರೋ ಅದರಂತೆ ನಡೆಯುತ್ತದೆ ಎಂದು ನಾವೆಲ್ಲರೂ ಬಿಲ್ ಹೊಡದ ತಕ್ಷಣ ಇಲ್ಲಿಗೆ ಬಂದು ಕುಳಿತಿರುತ್ತೇವೆ. ಎಲ್ಲರೂ ಕೂಡ ಅಜೆಂಡಾವನ್ನು ಗೌರವಿಸಿ ನಮ್ಮ ನಿಯಮಾನುಸಾರಗಳ ಪ್ರಕಾರ ನಾವು ಕರ್ತವ್ಯವನ್ನು ನಿರ್ವಹಣೆ ಮಾಡಿದರೆ ಸದನದ ಕಲಾಪ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಗೌರವಯುತವಾಗಿ ನಡೆಯಬಹುದು ಎಂದು ನನ್ನ ಅನಿಸಿಕೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಕಾವೇರಿ ವಿಚಾರವನ್ನು ನಾತು ರೆಫರ್ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಸದನದ ಹೊರಗಡೆ ಈ ಬಗ್ಗೆ ಹೇಳಿಕೆ ಕೊಡುತ್ತಿದ್ದರು. ಅಧಿವೇಶನ ನಡೆಯುತ್ತಿರುವಾಗ ಈ ರೀತಿಯಾಗಬಾರದು ಎಂದು ಪ್ರಸ್ತಾಪ ಮಾಡಿದ್ದರು ಬಿಟ್ಟರೆ ಬೇರೇನೂ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್:– ಅದು ಕಲಾಪವೇ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಕಲಾಪ ಅಲ್ಲಾ ಸಾರ್ ಅದು. ತಾವು ಈ ಸದನಕ್ಕೆ ಗೌರವ ಕೊಡುತ್ತೀದ್ದೀರೋ, ಇಲ್ಲವೋ ಎಂದು ಪ್ರಶ್ನೆ ಮಾಡುವ ಹಕ್ಕು ನಮಗಿದೆ. ಸದನದ ಅಧಿವೇಶನ ನಡೆಯಬೇಕಾದರೆ ನೀವು ಹೊರಗಡೆ ಹೇಳಿಕೆ ಕೊಡುವುದು ಸರಿಯೇ....

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾಧುಸ್ವಾಮಿಯವರೇ, ನಾನು ಏನು ಹೇಳಿದೆನೆಂದರೆ ಅಜೆಂಡಾದಲ್ಲಿ ಇರತಕ್ಕಂಥ ವಿಚಾರ ಪ್ರಸ್ತಾಪ ಮಾಡುವುದಕ್ಕೆ ತಮಗೆ ಹಕ್ಕಿದೆ. ಖಂಡಿತ ಅದನ್ನು ತಾವು ಪ್ರಸ್ತಾಪ ಮಾಡಬಹುದು. ಆದುದರಿಂದ ಅಜೆಂಡಾ ಎಂದು ಒಂದು ಇದ್ದಾಗ ಅಜೆಂಡಾದಲ್ಲಿರ ತಕ್ಕಂಥ ಒಂದೆರೆಡು ವಿಚಾರಗಳನ್ನು ಮುಂದುವರೆಸಿ ತದನಂತರ ಮುಂದಕ್ಕೆ ಹೋಗಬಹುದಾಗಿತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ:– ನಿಲುವಳಿ ಸೂಚನೆಯನ್ನು ನಾವು ಈಗಾಗಲೇ ಕೊಟ್ಟಿರುವುದರಿಂದ ಮಾನ್ಯ ಅಧ್ಯಕ್ಷರೇ, ತಾವು ಅದನ್ನು ಕನ್ಸಿಡರ್ ಮಾಡಲೇಬೇಕು ಸಾರ್, It is an obligation ತಾವು ಅದನ್ನು ಮಾಡಲೇಬೇಕು.

ಶ್ರೀ ಎಂ.ಪಿ. ಪ್ರಕಾಶ್:– ಮಾನ್ಯ ಅಧ್ಯಕ್ಷರೇ, ಹಿಂದಿನ ವಿಧಾನಸಭಾಧ್ಯಕ್ಷರು ಕೊಟ್ಟಿರುವಂಥ ಸಲಹೆ ಅದು ಉಪಯುಕ್ತವಾದಂಥ ರೀತಿಯಲ್ಲಿದೆ. ಅದಕ್ಕಿಂತಲೂ ಹೆಚ್ಚಾಗಿ ಇಲ್ಲಿ ಗಮನಿಸ ಬೇಕಾದುದ್ದು ಮತ್ತು ಅವರ ಅವಗಾಹನೆಗೆ ತರಬಯಸುವುದೇನೆಂದರೆ ಪ್ರಶ್ನೋತ್ತರ ವೇಳೆಯ ನಂತರ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ನಿಯಮ ಹೇಗಿದೆಯೋ ಅದರಂತೆ ಅಲ್ಲದೇ ಪ್ರಶ್ನೋತ್ತರ ವೇಳೆಯನ್ನು ಅಮಾನತ್ತಿನಲ್ಲಿಟ್ಟು ನಿಲುವಳಿ ಸೂಚನೆಯನ್ನು ತೆಗೆದುಕೊಂಡಿರುವ ಉದಾಹರಣೆಗಳು ಇವೆ. ತಾವೂ ಕೂಡ ಹಿಂದೆ ಆ ರೀತಿಯ ತೀರ್ಮಾನವನ್ನು ಕೊಟ್ಟಿರುವುದು ನಡೆದಿದೆ. ಆದ್ದರಿಂದ ಅಂತರ್ಗತವಾದಂಥ ಶಕ್ತಿ ಈ ಸಭೆಗೆ ಇದೆ, ಮಾನ್ಯ ಅಧ್ಯಕ್ಷರಿಗಿದೆ. ನಿಯಮಾವಳಿ ಇದೆ ಎಂದ ತಕ್ಷಣವೇ ನಿಯಮಾವಳಿ ಪ್ರಕಾರ ನಿಲುವಳಿ ಸೂಚನೆ ತೆಗೆದುಕೊಳ್ಳಬೇಕು ಎನ್ನುವ ದರ ಜೊತೆ ಜೊತೆಯಲ್ಲಿಯೇ ಪ್ರಶ್ನೋತ್ತರ ವೇಳೆಯನ್ನು ಅಮಾನತ್ತಿನಲ್ಲಿಟ್ಟು ಅತ್ಯಂತ ಜರೂರಾಗಿರ ತಕ್ಕಂಥ ವಿಷಯಗಳನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ಕೂಡ ಅನೇಕ ಸಂದರ್ಭಗಳಲ್ಲಿ ನಡೆದಿವೆ.

ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದಿಷ್ಟೆ, ಇದು ಬಹಳ ಜರೂರಾಗಿರತಕ್ಕಂಥ ವಿಷಯ, ಬಹಳ ಮಹತ್ವ ಪೂರಿತವಾದಂಥ ವಿಚಾರ. ಈ ವಿಚಾರದಲ್ಲಿ ಪ್ರಸ್ತಾಪ ಮಾಡಬೇಕಾಗಿರುವಂಥದ್ದಕ್ಕೆ ತಾವು ಮನವೊಲಿಸಿ ಅವರ ಅಧಿಕಾರದಲ್ಲಿ ಅವರ ವಿವೇಚನೆಯ ಮೂಲಕವಾಗಿ ಅಧಿಕಾರವನ್ನು ಪಡೆದು ವಿಚಾರ ಪ್ರಸ್ತಾಪ ಮಾಡಬಹುದು. ಇದಕ್ಕೆ ನಾವು ಆಕ್ಷೇಪಣೆ ಮಾಡುತ್ತಿಲ್ಲ. ಆದರೆ ಇವೊತ್ತಿನ ದಿವಸದ ನಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿ ಕೆಲವು ಸಮಿತಿಗಳನ್ನು ರಚನೆ ಮಾಡಬೇಕಾಗಿರುವಂಥದ್ದು ಇದೆ. ಇದಕ್ಕೆ ಸಂಬಂಧಪಟ್ಟಂತೆ ಕೇವಲ ಸೂಚನೆಯನ್ನು ಕೊಡತಕ್ಕಂಥದ್ದಷ್ಟೆ. ಆದಾದ ನಂತರ ತಮ್ಮ ತಮ್ಮ ವಿರೋಧ ಪಕ್ಷದ ನಾಯಕರು, ಬೇರೆ ಬೇರೆ ಮುಖಂಡರುಗಳ ಜೊತೆ ಚರ್ಚೆ ಮಾಡಿ ಯಾರ್ಯಾರು ಆ ಸಮಿತಿಗಳಲ್ಲಿ ಇರಬೇಕು ಎನ್ನುವಂಥ ವಿಚಾರದಲ್ಲಿ ನಾವು ತಮ್ಮ ಜೊತೆಗೆ ಮಾತನಾಡಿ ಆ ನೇಮಕಾತಿಯನ್ನು ಮಾಡುವಂಥದ್ದು ಅಥವಾ ಚುನಾವಣೆ ಮಾಡುವಂಥದ್ದು ಏನಿದೆಯೋ ಅದು ಆಗುತ್ತದೆ. ಆದರೆ ಇಲ್ಲಿ ನಾನು ಚುನಾವಣಾ ಪ್ರಸ್ತಾಪವನ್ನು ಮಾಡಿ ಕೈಬಿಡುತ್ತೇನೆ. ಅದಾದ ನಂತರ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ಪ್ರಸ್ತಾಪ ಇದೆ. ಅದನ್ನೂ ಕೂಡ ಕೈಬಿಟ್ಟು, ಈಗ ಅತ್ಯಂತ ಜರೂರಾದ ವಿಷಯ ಎಂದು ವಿರೋಧ ಪಕ್ಷದವರಾದ ತಾವೇನು ಕೊಟ್ಟಿದ್ದೀರಿ ನಿಯಮ 60ರ ಕೆಳಗಡೆ, ಅದನ್ನು ತೆಗೆದುಕೊಳ್ಳುವುದಕ್ಕೆ ಸಂಪೂರ್ಣವಾದ ಅಧಿಕಾರವಿದೆ. ಇದರಲ್ಲಿ ಯಾವ ಚರ್ಚೆಯೂ ಇಲ್ಲ. ಈಗ ನಾನು ಕೇವಲ ಚುನಾವಣಾ ಪ್ರಸ್ತಾಪವನ್ನು ಮಂಡಿಸುತ್ತೇನಷ್ಟೆ. ಚುನಾಯಿಸಬೇಕೆಂದು ನಾನು ಸೂಚಿಸುತ್ತೇನೆ ಎಂದು ಮಂಡಿಸುತ್ತೇನಷ್ಟೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಸಂಪ್ರದಾಯವನ್ನು ಮುರಿಯುವುದಕ್ಕೆ ತಾವೇಕೆ ಹೊರಟಿದ್ದೀರಿ. Why are you spoiling the custom?

(ಗೊಂದಲ)

ಅಧ್ಯಕ್ಷರು:– ದಯಮಾಡಿ ಯಾರಾದರೂ ಒಬ್ಬರು ನಿಂತುಕೊಂಡು ಮಾತನಾಡಿ. ಈಗ ಜಗದೀಶ್ ಶೆಟ್ಟರ್‌ರವರೇ, ತಾವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೇ, ನಿಯಮ 64ರಲ್ಲಿ ಏನಿದೆಯೆಂದರೆ

(ಗೊಂದಲ)

ಅಧ್ಯಕ್ಷರು:– ಈಗ ಮಾನ್ಯ ಸದಸ್ಯರುಗಳಲ್ಲಿ ನನ್ನ ಮನವಿಯೆಂದರೆ ಈಗ ನಾನು ಜಗದೀಶ್ ಶೆಟ್ಟರ್‌ರವರು ಹೆಸರನ್ನು ಕರೆದಿದ್ದೇನೆ. ಆದುದರಿಂದ ದಯಮಾಡಿ ಉಳಿದ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

+ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ):– ಮಾನ್ಯ ಅಧ್ಯಕ್ಷರೇ, ನಿಯಮ 64, ಇವೊತ್ತು ನಿಲುವಳಿ ಸೂಚನೆಯನ್ನು ಪ್ರತಿ ಪಕ್ಷದ ನಾಯಕರು ಕೊಟ್ಟಿದ್ದಾರೆ. ಇದಕ್ಕೆ ತಾವು ಒಪ್ಪಿಗೆ ಕೊಟ್ಟರೆ, ಅಥವಾ ಇದರ ಬಗ್ಗೆ ಒಪ್ಪಿಗೆ ಕೊಡುವುದಕ್ಕೆ ಮುಂಚೆಯೇ ತಮ್ಮನ್ನು ಮನವೊಲಿಸುವ ಪ್ರಯತ್ನವನ್ನು ಕೂಡ ಅವರು ಮಾಡುತ್ತಾರೆ. ಇಲ್ಲಿ ನಿಯಮ 64(1)ರ ಪ್ರಕಾರ "ಅಧ್ಯಕ್ಷರು 60ನೇ ನಿಯಮದ ಪ್ರಕಾರ ಒಪ್ಪಿಗೆ ಕೊಟ್ಟರೆ ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿದೆ ಯೆಂದು ಅಭಿಪ್ರಾಯ ಪಟ್ಟರೆ ಪ್ರಶ್ನೋತ್ತರಗಳ ತರುವಾಯ ಹಾಗೂ ಕಾರ್ಯಕ್ರಮ ಪಟ್ಟಿಯಲ್ಲಿರುವ ಇತರ ವಿಷಯಗಳನ್ನು ಪ್ರಾರಂಭಿಸುವುದಕ್ಕೆ ಮುಂಚೆಯೇ ಸಂಬಂಧಪಟ್ಟ ಸದಸ್ಯರ ಹೆಸರನ್ನು

ಕರೆಯಬೇಕು. ಅಂಥ ಸದಸ್ಯರು ತನ್ನ ಸ್ಥಾನದಲ್ಲಿ ಎದ್ದು ನಿಂತು ಸದನದಲ್ಲಿ ನಿಲುವಳಿ ಸೂಚನೆಯನ್ನು ತರಲು ಅನುಮತಿ ಕೇಳತಕ್ಕಂಥದ್ದು ಎಂದು ಇದೆ." ಆದರೆ ಇವೊತ್ತು ಅಜೆಂಡಾದಲ್ಲಿ ಪ್ರಶ್ನೋತ್ತರ ವೇಳೆ ಕಲಾಪ ಇಲ್ಲ. ಇನ್ನಿತರ ವಿಷಯಗಳು ಅಜೆಂಡಾದಲ್ಲಿವೆ. ಆದುದರಿಂದ ಇವುಗಳನ್ನು ಬದಿಗೊತ್ತಿ ಇವೊತ್ತು ಈ ಒಂದು ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಒಪ್ಪಿಗೆಯನ್ನು ಕೊಡಬೇಕಾಗುತ್ತದೆ. ಈ ಬಗ್ಗೆಯೇ ನಿಯಮ 64ರಲ್ಲಿ ಸ್ಪಷ್ಟವಾಗಿದೆ ಹೇಳಲಾಗಿದೆ. ಇದರಲ್ಲಿ ಯಾವುದೇ ಒಂದು ಸಂಶಯವೇ ಇಲ್ಲ. ನಿಯಮ 64ರ ಪ್ರಕಾರ ಈ ನಿಲುವಳಿ ಸೂಚನೆಯನ್ನು ಮಂಡನೆ ಮಾಡುವುದಕ್ಕೆ ದಯವಿಟ್ಟು ಮಾನ್ಯ ಅಧ್ಯಕ್ಷರು ಅನುಮತಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ತಮ್ಮ ತೀವ್ರವಾದಂಥ ಭಾವನೆಗಳನ್ನು ನಾವೆಲ್ಲರೂ ಪರಿಗಣಿಸಿದ್ದೇವೆ ಹಾಗೂ ಸದನವೂ ಕೂಡ ಪರಿಗಣಿಸಿದೆ. ಇಲ್ಲಿ ಅನೇಕ ಸಂದರ್ಭಗಳಲ್ಲಿ ಇದು ನಮ್ಮ ನಡವಳಿಕೆಗಳ ಕುರಿತಾಗಿ ಮಾಡಿಕೊಂಡಿರತಕ್ಕಂಥ ನಿಯಮಾವಳಿಗಳು. ಈ ನಿಯಮಾವಳಿಗಳನ್ನು ಅನೇಕ ಬಾರಿ ಅವೊತ್ತಿನ ಸಂದರ್ಭಗಳಿಗೆ ಅನುಗುಣವಾದಂಥ ರೀತಿಯಲ್ಲಿ ತಮ್ಮ ವಿವೇಚನೆಯ ಮೂಲಕ ತಮ್ಮ ಅಂತರ್ಗತ ಶಕ್ತಿಯನ್ನು ಉಪಯೋಗಿಸಿಕೊಂಡು ಮಾಡಿರತಕ್ಕಂಥ ಉದಾಹರಣೆಗಳಿವೆ. ತಾವೂ ಕೂಡ ಇದನ್ನು ಒಂದು ಪ್ರತಿಷ್ಠೆಯ ವಿಷಯವನ್ನಾಗಿ ಪರಿವರ್ತಿಸುವಂಥ ಅಗತ್ಯವಿಲ್ಲ. ಇಲ್ಲಿ ಇಡೀ ಸದನ ಒಪ್ಪಿಗೆ ಕೊಡುವುದಾದರೆ ಚುನಾವಣಾ ಪ್ರಸ್ತಾಪವನ್ನು ನಾನು ಮಾಡುತ್ತೇನೆ. ಅಥವಾ ಚುನಾವಣಾ ಪ್ರಸ್ತಾಪವನ್ನು ನಾನು ಮಾಡುವುದಕ್ಕೆ ತಾವು ಅವಕಾಶ ಕೊಡುವುದಿಲ್ಲವಾದರೆ ತಾವು ಇಲ್ಲಿ ಈಗ ವಿವೇಚನೆ ಮಾಡಿರತಕ್ಕಂಥದ್ದನ್ನು ಬಿಡಬಹುದು ಅಥವಾ ಇದನ್ನು ತೆಗೆದುಕೊಳ್ಳಲು ತಮಗೆ ಮನವೊಲಿಸಬಹುದು. ಆದರೆ ಇದನ್ನು ಸರ್ಕಾರ ಒಂದು ಪ್ರತಿಷ್ಠೆಯ ವಿಚಾರವೆಂದು ತೆಗೆದುಕೊಳ್ಳುವುದಿಲ್ಲ. ತಾವು ನಿಲುವಳಿ ಸೂಚನೆಯನ್ನು ಮಂಡಿಸುವುದಾಗಿದ್ದರೆ ಮಾನ್ಯ ಅಧ್ಯಕ್ಷರು ಅದಕ್ಕೆ ಒಪ್ಪಿಗೆ ಕೊಡುವುದಾಗಿದ್ದರೆ ಮಾಡಲಿ. ಆದರೆ ಇದೇ ಸದನದಲ್ಲಿ ಅನೇಕ ಬಾರಿ ಇಂಥ ಉದಾಹರಣೆಗಳು ನಡೆದಿರುವುದು ಇವೆ ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ. ಇದು ಕೇವಲ ಒಂದು ನಿಮಿಷದ ಪ್ರಸ್ತಾಪ. ಇದು ಇಡೀ ಸದನಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದಾಗಿದೆ. ಸಮಿತಿಗಳನ್ನು ರಚನೆ ಮಾಡುವುದಕ್ಕೋಸ್ಕರವಾಗಿ ಚುನಾವಣಾ ಪ್ರಸ್ತಾವವನ್ನು ನಾನು ಸೂಚಿಸಲೇ ಬೇಕಾಗಿರತಕ್ಕಂಥ ಕಾರಣಕ್ಕಾಗಿ ತಮ್ಮ ಮುಂದೆ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಇದು ಪ್ರತಿಷ್ಠೆಯ ವಿಚಾರವಲ್ಲ. ತಾವು ಅವರಿಗೆ ಒಪ್ಪಿಗೆ ಕೊಡುವುದಾಗಿದ್ದರೆ ಕೊಡಿ. ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡುವುದೇನೆಂದರೆ ಈಗ ಚುನಾವಣಾ ಪ್ರಸ್ತಾವ ಒಂದು ನಿಮಿಷದ ಪ್ರಸ್ತಾವನೆ, ಅದನ್ನು ಮಂಡಿಸುತ್ತಾರೆ. ಅಷ್ಟೇ, ಆದಾದ ಮೇಲೆ ತಾವು ನಿಲುವಳಿ ಸೂಚನೆ ಏನು ಕೊಟ್ಟಿದ್ದೀರಿ, ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಸಂಸದೀಯ ಸಚಿವರು ಚುನಾವಣಾ ಪ್ರಸ್ತಾವವನ್ನು ಮಂಡಿಸುವುದು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಇದು ಸಂಪ್ರದಾಯದ ವಿರುದ್ಧ ಆಗುತ್ತದೆ. ತಮ್ಮ ಮಾತು ಕೇಳಿ ವಿರೋಧ ಮಾಡುವುದಿಲ್ಲ.